ಪ್ರಜಾವಾಣಿ



ಹೆರಾನ್ಸ್ ಕ್ಲಬ್ ಆಶ್ರಯದಲ್ಲಿ 'ಜಂಗಲ್ ಲಾಡ್ಜಸ್ ಮತ್ತು ರಿಸಾರ್ಟ್ಸ್ ಟ್ರೋಫಿ'ಗಾಗಿ ನಡೆದ ಅಂತರ ಕಾಲೇಜು ಕ್ರಿಕೆಟ್ ಟೂರ್ನಿಯಲ್ಲಿ ಗೆದ್ದ ಎಸ್‌ಬಿಎಂ ಜೈನ್ ಕಾಲೇಜು ತಂಡ. ಎಡದಿಂದ (ಹಿಂಬದಿ ಸಾಲಿನಲ್ಲಿ ನಿಂತಿರುವವರು) ಲಗಾನ್, ಮಧುಸೂದನ್, ಪ್ರಣವ್, ಪ್ರಸಿದ್ಧ್, ಆದಿತ್ಯ ಸೋಮಣ್ಣ, ಶಿವಿಲ್, ವಿಶ್ವನಾಥ, ಮಿಲಿಂದ್, ಲಾಲ್‌ಸಚಿನ್, (ಮಧ್ಯದ ಸಾಲಿನಲ್ಲಿ ನಿಂತಿರುವವರು) ರೋಹಿತ್ ಗೌಡ, ಸ್ಪೋರ್ಟ್ಸ್ ನೆಸ್ಟ್‌ನ ಆಡಳಿತ ನಿರ್ದೇಶಕ ಸಂಜೀವ್, ವೈಎಂಸಿಎ ಕಾರ್ಯದರ್ಶಿ ರತ್ನಕುಮಾರ್, ಮಾಜಿ ಟೆಸ್ಟ್ ಆಟಗಾರ ರಘುರಾಮ ಭಟ್, ಹೆರಾನ್ಸ್ ಕ್ಲಬ್‌ನ ಸಂಘಟನಾ ಕಾರ್ಯದರ್ಶಿ ಕೆ.ಮುರಳಿಧರ್, ಕೋಚ್ ಸಿಧುವನ್, (ಮಂಡಿವೂರಿ ಕುಳಿತಿರುವವರು) ಎಡಬದಿಯಲ್ಲಿ ಎಸ್.ಪಿ. ಅರ್ಜುನ್, ಶರತ್ ಶ್ರೀನಿವಾಸ್, ಬಲಬದಿಯಲ್ಲಿ ಬಿ.ಆರ್.ಶರತ್, ವೈಶಾಖ್.

ಅಂತರ ಕಾಲೇಜು ಕ್ರಿಕೆಟ್

# ಜೈನ್ ಕಾಲೇಜಿಗೆ ಪ್ರಶಸ್ತಿ

ಬೆಂಗಳೂರು: ಎಸ್‌ಬಿಎಂ ಜೈನ್ ಕಾಲೇಜು ತಂಡದವರು ಹೆರಾನ್ಸ್ ಕ್ರಿಕೆಟ್ ಕ್ಲಬ್ ವತಿಯಿಂದ ನಡೆದ ಅಂತರ ಕಾಲೇಜು ಕ್ರಿಕೆಟ್ ಟೂರ್ನಿಯಲ್ಲಿ ಗೆದ್ದು 'ಜಂಗಲ್ ಲಾಡ್ಜಸ್ ಮತ್ತು ರಿಸಾರ್ಟ್ಸ್' ಟ್ರೋಫಿಯನ್ನು ತಮ್ಮದಾಗಿಸಿಕೊಂಡರು.

ವೈಎಂಸಿಎ ಮೈದಾನದಲ್ಲಿ ಮಂಗಳವಾರ ನಡೆದ ಫೈನಲ್ ಪಂದ್ಯದಲ್ಲಿ ಜೈನ್ ಕಾಲೇಜು ತಂಡದವರು ಪ್ರೆಸಿಡೆನ್ಸಿ ಕಾಲೇಜು ತಂಡವನ್ನು ಆರು ವಿಕೆಟ್‌ಗಳಿಂದ ಸೋಲಿಸಿದರು.

ಜೈನ್ ಕಾಲೇಜು ತಂಡವು ಟಾಸ್ ಗೆದ್ದು ಪ್ರೆಸಿಡೆನ್ಸಿ ಕಾಲೇಜು ತಂಡದವರನ್ನು ಬ್ಯಾಟಿಂಗ್‌ಗೆ ಇಳಿಸಿತು. ಮಧ್ಯಮ ವೇಗದ ಬೌಲರ್ ವೈಶಾಖ್, ಲಾಲ್ ಸಚಿನ್ ಮತ್ತು ಶಿವಾಲಿ ತಮ್ಮ ಪರಿಣಾಮಕಾರಿ ಬೌಲಿಂಗ್‌ನಿಂದ ಪ್ರೆಸಿಡೆನ್ಸಿ ಬ್ಯಾಟ್ಸ್‌ಮನ್‌ಗಳ ಮೇಲೆ ಸಾಕಷ್ಟು ಒತ್ತಡ ಹೇರಿದರು. ಹೀಗಾಗಿ ಆ ತಂಡ 125 ರನ್ ಪೇರಿಸುವಷ್ಟರಲ್ಲಿ ಎಲ್ಲಾ ವಿಕೆಟ್‌ಗಳು ತಪತಪನೆ ಬಿದ್ದು ಹೋದವು. ರಕ್ಷಿತ್ ಮತ್ತು ಪುನೀತ್ ಮಾತ್ರ ಗಮನಾರ್ಹ ಸಾಮರ್ಥ್ಯ ತೋರಿದರು. ನಂತರ ಆಡಲಿಳಿದ ಜೈನ್ ಕಾಲೇಜಿನ ಲಾಲ್ ಸಚಿನ್, ವೈಶಾಖ್ ಮತ್ತು ಅರ್ಜುನ್ ತಮ್ಮ ಸತ್ವಯುತ ಬ್ಯಾಟಿಂಗ್‌ನಿಂದ ಜೈನ್ ಕಾಲೇಜಿಗೆ ಸುಲಭದಲ್ಲೇ ಗೆಲುವು ತಂದಿತ್ತರು.

ಟೂರ್ನಿಯ ಉತ್ತಮ ಬ್ಯಾಟ್ಸ್‌ಮನ್ ಪ್ರಶಸ್ತಿಯನ್ನು ಜೈನ್ ಕಾಲೇಜಿನ ಲಾಲ್ ಸಚಿನ್ ಪಡೆದುಕೊಂಡರೆ, ಉತ್ತಮ ಬೌಲರ್ ಪ್ರಶಸ್ತಿಯನ್ನು ಪ್ರೆಸಿಡೆನ್ಸಿ ಕಾಲೇಜಿನ ತಿಮ್ಮಯ್ಯ ತಮ್ಮದಾಗಿಸಿಕೊಂಡರು. ಪ್ರೆಸಿಡೆನ್ಸಿ ಕಾಲೇಜಿನ ರಕ್ಷಿತ್ ಟೂರ್ನಿಯ ಅತ್ಯುತ್ತಮ ಆಲ್‌ರೌಂಡರ್ ಪ್ರಶಸ್ತಿ ಎತ್ತಿಕೊಂಡರೆ, ಲಾಲ್ ಸಚಿನ್ ಟೂರ್ನಿಯ ಶ್ರೇಷ್ಠ ಆಟಗಾರ ಪ್ರಶಸ್ತಿ ಗಳಿಸಿದರು.

ಈ ಟೂರ್ನಿಯಲ್ಲಿ 10 ತಂಡಗಳು ಪೈಪೋಟಿ ನಡೆಸಿದ್ದವು. ಸಮಾರೋಪದಲ್ಲಿ ಮಾಜಿ ಟೆಸ್ಟ್ ಆಟಗಾರ ರಘುರಾಮ ಭಟ್ ವಿಜೇತರಿಗೆ ಪ್ರಶಸ್ತಿ ವಿತರಿಸಿದರು.

ಸ್ಕೋರು ವಿವರ: ಪ್ರೆಸಿಡೆನ್ಸಿ ಕಾಲೇಜು: 24.2 ಓವರುಗಳಲ್ಲಿ 125 (ರಕ್ಷಿತ್ 49, ಪುನೀತ್ 20, ವೈಶಾಖ್ 22ಕ್ಕೆ3, ಶಿವಾಲಿ 31ಕ್ಕೆ2, ಲಾಲ್ ಸಚಿನ್ 8ಕ್ಕೆ 2.

ಎಸ್‌ಬಿಎಂ ಜೈನ್ ಕಾಲೇಜು: 22.1 ಓವರುಗಳಲ್ಲಿ 4ವಿಕೆಟ್ ನಷ್ಟಕ್ಕೆ 129 (ಲಾಲ್ ಸಚಿನ್ 32, ವೈಶಾಖ್ 32, ಎಸ್.ಬಿ.ಅರ್ಜುನ್ 36).